# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 451
2. ಸದಸ್ಯರ ಹೆಸರು : ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 10.12.2020
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | 2017-18 ಹಾಗೂ 2018-19ನೇ ಸಾಲಿನ ಬೀದರ್ ಜಿಲ್ಲಾ ಮುದ್ರಾಂಕ ಸಂಗ್ರಹವಾದ ಅಧಿಬಾರ ಶುಲ್ಕದ ಮೊತ್ತವನ್ನು ನಿಧಿ-3ರಲ್ಲಿ ಜಮಾ ಮಾಡಿರುವುದು ನಿಜವೇ; | ಹೌದು |
| ಆ. | ಹಾಗಿದ್ದಲ್ಲಿ ಬೀದರ್ ಜಿಲ್ಲೆಯ 5 ತಾಲ್ಲೂಕು ಪಂಚಾಯತಿ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ ವಿವಿಧ ಕಾಮಗಾರಿಗಳ ಬಿಲ್ಲುಗಳ ಪಾವತಿ ಮಾಡುವ ಸಂಬಂಧ ಸಂಗ್ರಹಿಸಲಾದ ಅಧಿಬಾರ ಮೊತ್ತವಾದ ಸುಮಾರು 3.48 ಕೋಟಿ ರೂ.ಗಳನ್ನು ಖಜಾನೆ-2 ರಿಂದ ತಾಲ್ಲೂಕು ಪಂಚಾಯತಿ ನಿಧಿ-3ಕ್ಕೆ ಜಮಾ ಮಾಡುವಂತೆ ಬೀದರ್ ಜಿಲ್ಲಾ ಪಂಚಾಯತಿಯಿಂದ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು; ಹಾಗೂ ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ? (ವಿವರಗಳೊಂದಿಗೆ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಆಇ 405 ವೆಚ್ಚ 6/2019 ದಿನಾಂಕ:10.1.2020ರ ಮೂಲಕ 2014-15ರಿಂದ 2017-18 ರವರೆಗೆಜಿಲ್ಲಾ/ತಾಲ್ಲೂಕು ಪಂಚಾಯತಿ ಗಳ ನಿಧಿ1 ಮತ್ತು (ಮುದ್ರಾಂಕ ಶುಲ್ಕ ಒಳಗೊಂಡಿರುವ)ನಿಧಿ-3ರಡಿ ವೆಚ್ಚ ವಾಗದ ಅನುದಾನವನ್ನು ಮರು ಮೌಲ್ಯೀಕರಿಸಲು ದಿನಾಂಕ: 29.2.2020ರೊಳಗೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿತ್ತು. ತದನಂತರ ದಿನಾಂಕ:10.9.2020ರ ಪತ್ರದಲ್ಲಿ ಇನ್ನೊಮ್ಮೆ ಕಾಲಾವಕಾಶ ವನ್ನು ನೀಡಿ ಪ್ರಸ್ತಾವನೆಯನ್ನು ದಿನಾಂಕ:31.10.2020 ರೊಳಗೆ ಸಲ್ಲಿಸಲು ತಿಳಿಸಲಾಗಿದ್ದಾಗ್ಯೂ ಬೀದರ್ ಜಿಲ್ಲಾ ಪಂಚಾಯತಿಯ ಪ್ರಸ್ತಾವನೆಯು ದಿನಾಂಕ:01.12.2020ರಂದು ಆರ್ಥಿಕ ಇಲಾಖೆಯಲ್ಲಿ ಸ್ವೀಕೃತಗೊಂಡಿದ್ದು, ಪರಿಶೀಲನೆಯಲ್ಲಿದೆ. |

**ಸಂಖ್ಯೆ:** ಆಇ 156 ವೆಚ್ಚ-6/2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ.